# ಕೃಷ್ಣಾ ಸಿನಿಮಾ ವ್ಯಾಕರಣ

**ಹಿರಿಯ ನಟ ರವಿ ಭಟ್ ಅವರ ಮಗಳು ಕೃಷ್ಣಾ 'ಸವರ್ಣದೀರ್ಘ ಸಂಧಿ' ಸಿನಿಮಾ ಮೂಲಕ ಚಿತ್ರರಂಗ ಪ್ರವೇಶಿಸುತ್ತಿದ್ದಾರೆ. ಈ ಸಿನಿಮಾ, ತಮಗೆ ಸುವರ್ಣಾವಕಾಶಗಳ ದಾರಿಯನ್ನು ತೆರೆಯಲಿದೆ ಎಂಬ ನಂಬಿಕೆಯಲ್ಲಿ ಅವರಿದ್ದಾರೆ.**

■ ಪದ್ಮನಾಭ ಭಟ್

'ಏನ್ಮಾಡ್ತೀಯೋ ಗೊತ್ತಿಲ್ಲ. ಆಡಿಷನ್‌ನಲ್ಲಿ ಸೆಲೆಕ್ಟ್ ಆಗ್ಬೇಕು. ಈ ಪಾತ್ರ ನಿನ್ನದಾಗ್ಬೇಕು'

ಸಿನಿಮಾ ಕಥೆಯನ್ನು ಕೇಳಿ ಹೊರಬಂದಾಗ, ಅಪ್ಪ ಖಡಾಖಂಡಿತವಾಗಿ ಹೀಗೆ ಹೇಳಿದಾಗ ಆ ಹುಡುಗಿಗೆ ಅಚ್ಚರಿಯಾಗಿತ್ತು. ಅಂಥ ವಿಶೇಷ ಏನಿದೆ ಇದ್ರಲ್ಲಿ ಅಂತ ಗೊತ್ತಾಗಲಿಲ್ಲ. ಆದರೂ ಶ್ರದ್ಧೆಯಿಂದ ಆಡಿಷನ್ ಕೊಟ್ಟು, ನಾಯಕಿಯ ಪಾತ್ರಕ್ಕೆ ಆಯ್ಕೆಯೂ ಆದಳು. ಸಿನಿಮಾ ಮುಗಿದ ಮೇಲೆ ತಂಡದೊಂದಿಗೆ ವೀಕ್ಷಿಸಿದಾಗ ಅವರಿಗೆ ನೆನಪಾಗಿದ್ದು, ಅಪ್ಪನ ಮಾತೇ.

ಇದು 'ಸವರ್ಣದೀರ್ಘ ಸಂಧಿ' ಮೂಲಕ ಸಿನಿಮಾ ವ್ಯಾಕರಣ ಕಲಿಯಲು ಹೊರಟಿರುವ ಕೃಷ್ಣಾ ಅವರ ಅನುಭವ.

ಕೃಷ್ಣಾ ಅವರಿಗೆ ಚಿತ್ರರಂಗ ದೂರವೇನಲ್ಲ. ತಂದೆ ರವಿ ಭಟ್, ಕಿರುತೆರೆ ಮತ್ತು ಸಿನಿಮಾ ಎರಡರಲ್ಲಿಯೂ ಸಕ್ರಿಯರಾಗಿರುವ ನಟ. ದೊಡ್ಡಮ್ಮ ವಿನಯಾ ಪ್ರಸಾದ್ ಹೆಸರಾಂತ ನಟಿ. ಹೀಗೆ ಕ್ಯಾಮೆರಾ ಫೋಕಸ್‌ನಲ್ಲಿಯೇ ಬೆಳೆದವರಾದರೂ ಕೃಷ್ಣಾಗೆ ಸಿನಿಮಾರಂಗಕ್ಕೆ ಬರುವ ಉತ್ಸಾಹವೇನೂ ಇರಲಿಲ್ಲ. ಬದಲಿಗೆ ಅವರಿಗೆ ಹೋಟೆಲ್ ಮ್ಯಾನೇಜ್‌ಮೆಂಟ್ ಕಲಿಯಬೇಕು; ತನ್ನದೇ ಒಂದು ಹೋಟೆಲ್ ಪ್ರಾರಂಭ ಮಾಡಬೇಕು ಎಂಬ ಕನಸಿತ್ತು. ಆದರೆ ಕಾಲೇಜಿಗೆ ಅಡಿಯಿಡುತ್ತಿದ್ದಾಗಲೇ ವಿನಯಾ ಪ್ರಸಾದ್, 'ನೀನ್ಯಾಕೆ ಮಾಡೆಲಿಂಗ್ ಮಾಡಬಾರದು?' ಎಂದು ಕನಸಿನ ಬೀಜವೊಂದನ್ನು ಮನಸೊಳಗೆ ಬಿತ್ತಿದರು. ಪಾಕೆಟ್‌ಮನಿಗೆ ಹಣ ಆಗುತ್ತದೆ ಎಂಬ ಕಾರಣಕ್ಕೆ ಕೃಷ್ಣಾ ಕೂಡ ರ್‍ಯಾಂಪ್ ಮೇಲೆ ಬೆಕ್ಕಿನ ನಡಿಗೆ ಆರಂಭಿಸಿದರು. ಸುಮ್ಮನೇ ಕುತೂಹಲಕ್ಕೆ ಅಂತ 'ಫೆಮಿನಾ' ಮಾಡೆಲ್ ಕಾಂಪಿಟೇಷನ್‌ಗೆ ಹೋಗಿ, ಗೆದ್ದ ಪರಿಣಾಮವಾಗಿ 2015ರಲ್ಲಿ ಕೃಷ್ಣಾ ಅವರ ಚಿತ್ರ 'ಫೆಮಿನಾ' ಪತ್ರಿಕೆಯ ಮುಖಪುಟದಲ್ಲಿಯೂ ರಾರಾಜಿಸಿತ್ತು.

'ಫೆಮಿನಾ ಪತ್ರಿಕೆಯ ಕವರ್ ಪೇಜ್‌ನಲ್ಲಿ ನನ್ನ ಚಿತ್ರ ನೋಡಿ ನಾನು ಫುಲ್ ಫ್ಲ್ಯಾಟ್ ಆಗಿಬಿಟ್ಟಿದ್ದೆ. ಆಗಲೇ ನನ್ನಿಂದ ಈ ಕ್ಷೇತ್ರದಲ್ಲಿ ಏನಾದರೂ ಮಾಡಲು ಸಾಧ್ಯ ಎಂಬ ವಿಶ್ವಾಸವೂ ಮೂಡಿತು' ಎಂದು ನೆನಪಿಸಿಕೊಳ್ಳುತ್ತಾರೆ.

ಕಾಲೇಜು ಮುಗಿದ ಮೇಲೆ ಮುಂದೇನು ಎಂಬ ಪ್ರಶ್ನೆ ಕೃಷ್ಣಾ ಅವರ ಮುಂದೆ ಬಂದಾಗ, ತಂದೆ ರವಿ ಭಟ್ ಮತ್ತು ವಿನಯಾ ಪ್ರಸಾದ್, ನಟನೆಯನ್ನೇ ವೃತ್ತಿಯಾಗಿಸಿಕೊಳ್ಳುವ ಸಲಹೆ ಕೊಟ್ಟರು. ಸಲಹೆಯೇನೋ ಕೃಷ್ಣಾಗೆ ಇಷ್ಟವೇ ಆಯಿತು. ಆದರೆ ಅದಕ್ಕೆ ಸರಿಯಾದ ಸಿದ್ಧತೆಯೂ ಬೇಕಲ್ಲ. ಆಗ ಅವರಿಗೆ ಸಿಕ್ಕಿದ್ದು ಉಷಾ ಭಂಡಾರಿ.

'ನನ್ನ ಮನೆಯಲ್ಲಿಯೇ ಜನಪ್ರಿಯ ನಟರಿದ್ದರು. ಆದರೆ ನಾನು ನಟನೆಯನ್ನು ಕಲಿತಿದ್ದು ಮಾತ್ರ ಉಷಾ ಭಂಡಾರಿ ಅವರ ಬಳಿ. ಅವರೇ ನನ್ನ ಗುರು' ಎಂದು ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತಾರೆ. 'ತುಳುವಿನಲ್ಲಿ 'ಚಾಲಿ ಪೋಲಿಲು' ಎಂಬ ಸಿನಿಮಾ ನಿರ್ದೇಶನ ಮಾಡಿದ್ದ ವೀರೇಂದ್ರ ಶೆಟ್ಟಿ ಕನ್ನಡದಲ್ಲಿ ಸಿನಿಮಾ ಮಾಡ್ತಿದ್ದಾರೆ. ಹೋಗಿ ಆಡಿಷನ್ ಕೊಡು' ಎಂದು ಸಲಹೆ ನೀಡಿದ್ದೂ ಉಷಾ ಭಂಡಾರಿ ಅವರೇ.

'ಸವರ್ಣದೀರ್ಘ ಸಂಧಿ' ಸಿನಿಮಾ ಮೂಲಕ ಚಿತ್ರರಂಗ ಪ್ರವೇಶಿಸುತ್ತಿರುವುದಕ್ಕೆ ಕೃಷ್ಣಾಗೆ ಸಂತೋಷವಿದೆ. ಹೆಸರಷ್ಟೇ ಚಿತ್ರವೂ ವಿಭಿನ್ನವಾಗಿರಲಿದೆ ಎನ್ನುವುದು ಅವರ ಅಂಬೋಣ. 'ಇದು ಮಾಮೂಲಿ ಮಾದರಿಯ ಸಿನಿಮಾ ಅಲ್ಲ. ಹಾಗೆಯೇ ತೀರಾ ಅಮೂರ್ತ ಸಿನಿಮಾ ಕೂಡ ಅಲ್ಲ. ತುಂಬ ಮಜಾ ಕೊಡುವ ವಿಭಿನ್ನ ಸಿನಿಮಾ. ನನ್ನ ಪಾತ್ರವೂ ಬರೀ ನಾಯಕನ ಹಿಂದೆ ಸುತ್ತುವ ಲವ್ ಸ್ಟೋರಿಗಷ್ಟೇ ಸೀಮಿತವಾಗಿದ್ದಲ್ಲ. ಕಥೆಯ ವಾತಾವರಣದೊಳಗೆ ಅವಿಭಾಜ್ಯವಾಗಿ ಹೆಣೆದುಕೊಂಡಿರುವ ಮುಖ್ಯ ಪಾತ್ರ' ಎಂದು ವಿವರಣೆ ನೀಡುತ್ತಾರೆ ಅವರು.

ಈ ಚಿತ್ರದಲ್ಲಿ ಕೃಷ್ಣಾ ಗಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಖ್ಯಾತ ಸಂಗೀತ ನಿರ್ದೇಶಕನ ಮಗಳ ಪಾತ್ರ ಅವರದು. ಇಲ್ಲಿ ಇನ್ನೊಂದು ವಿಶೇಷವೂ ಇದೆ. ಸಿನಿಮಾದಲ್ಲಿ ಕೃಷ್ಣಾಳ ತಂದೆಯ ಪಾತ್ರ ನಿರ್ವಹಿಸಿರುವವರು, ನಿಜಜೀವನದಲ್ಲಿಯೂ ತಂದೆಯಾಗಿರುವ ರವಿ ಭಟ್ ಅವರೇ! 'ಮೊದಲ ಸಿನಿಮಾದಲ್ಲಿಯೇ ಅಪ್ಪನ ಜೊತೆ ನಟಿಸುವ ಅವಕಾಶ ಸಿಗುವುದು ಅದೃಷ್ಟ ಅಲ್ಲವಾ?' ಎಂದು ಅರಳುಗಣ್ಣಿನಲ್ಲಿ ಖುಷಿ ಸೂಸುತ್ತಾರೆ ಕೃಷ್ಣಾ.

ಕಿರುತೆರೆಯಲ್ಲಿ ಸಾಕಷ್ಟು ಅವಕಾಶಗಳು ಬರುತ್ತಿದ್ದರೂ ಕೃಷ್ಣಾ ಗಮನ ಸಿನಿಮಾರಂಗದ ಮೇಲಿದೆ. ನಟನಾಭವಿಷ್ಯದ ಕುರಿತು ಪಕ್ಕಾ ಪ್ಲ್ಯಾನ್ ಮಾಡುವುದರಲ್ಲಿ ಇವರಿಗೆ ನಂಬಿಕೆ ಇದ್ದಂತಿಲ್ಲ. 'ನಂಗೆ ಮಜಾ ಕೊಡುವ ಪಾತ್ರಗಳನ್ನು ಒಪ್ಪಿಕೊಂಡು ನಟಿಸುತ್ತಾ ಹೋಗುತ್ತೇನೆ' ಎನ್ನುವುದು ಅವರ ನಿಲುವು. ■

